## ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ. 819/2015

ಸಾಕ್ಷಿಗೆ ದಿನಾಂಕ 03-07-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 1 P.W.: 1

| | | |
|---|---|---|
| ಹೆಸರು | : | ಗುರುಸಿದ್ದಪ್ಪ |
| ತಂದೆಯ ಹೆಸರು | : | ವಿರೂಪಾಕ್ಷಪ್ಪ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಏಣಗಿ ಬಸಾಪುರ ಗ್ರಾಮ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ಚಾಸಾ-4 ನನ್ನ ಅಕ್ಕ, ಚಾಸಾ-9 ನನ್ನ ಅಜ್ಜಿ, ಆರೋಪಿತನು ನಮ್ಮ ಊರಿನವರು ನನಗೆ ಪರಿಚಯ ಇರುತ್ತಾರೆ.

ನಮ್ಮ ಮತ್ತು ಆರೋಪಿತನ ನಡುವೆ ಯಾವುದೇ ಗಲಾಟೆಯಾಗಿಲ್ಲ, ಆರೋಪಿತನು ಚಾಸಾ-4 ರವರಿಗೆ ಮತ್ತು ಚಾಸಾ-7 ರವರ ಜೊಸೆ ಯಾವುದೇ ಹಲ್ಲೆ ಮಾಡಿಲ್ಲ, ಯಾವುದೇ ರೀತಿಯಿಂದ ಗಾಯಪಡಿಸಿಲ್ಲ, ಜೀವ ಬೆದರಿಕೆ ಹಾಕಿಲ್ಲ ಹಾಗೂ ಯಾವುದೇ ವಂಚನೆ ಮಾಡಿಲ್ಲ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ದೂರಾಗಿದ್ದು ಸದರಿ ದಾಖಲೆಯಲ್ಲಿ ಸಾಕ್ಷಿ ತನ್ನ ಸಹಿ ಇದೆ ಅಂತಾ ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1ಎ ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ಏನು ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಗೆ ಪೋಲೀಸರ ಕೋರಿಕೆ ಮೇರೆಗೆ ನಾನು ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ. ಸಾಕ್ಷಿಗೆ ಎರಡು ದಾಖಲೆಗಳನ್ನು ತೋರಿಸಲಾಗಿ ಅವು ಘಟನಾ ಸ್ಥಳದ ಪಂಚನಾಮೆಗಳಾಗಿದ್ದು ಸದರಿ ದಾಖಲೆಗಳಲ್ಲಿ ಸಾಕ್ಷಿ ತನ್ನ ಸಹಿಗಳು ಇದೆ ಅಂತಾ ನೋಡಿ ಗುರುತಿಸಿದ್ದು ಸದರಿ ದಾಖಲೆಗಳನ್ನು ನಿಪಿ-2 ಮತ್ತು 3 ಎಂದು ಮತ್ತು ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ-2ಎ ಮತ್ತು 3ಎ ಎಂದು ಗುರುತಿಸಲಾಯಿತು. ಸದರಿ ದಾಖಲೆಗಳಲ್ಲಿ ಏನು ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಗಳಿಗೆ ನಾನು ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ. ಸಾಕ್ಷಿಗೆ 4 ಪೋಟೋಗಳನ್ನು ತೋರಿಸಲಾಗಿ ಸಾಕ್ಷಿಯು ಸದರಿ ಪೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-4 ರಿಂದ 7 ಎಂದು ಗುರುತಿಸಲಾಯಿತು. ಸದರಿ

ಫೋಟೋಗಳನ್ನು ಪೋಲೀಸರು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೋಲೀಸರು ಯಾವುದೇ ಮು ಮಾಲುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲು ಕೇಳಿಕೊಂಡಿದ್ದು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-</u>

ಆರೋಪಿತನು ಏಣಗಿ ಬಸಾಪುರ ಗ್ರಾಮದಲ್ಲಿ ಬಿ ಪಿ ಎಂ ಪೋಸ್ಟ ಮಾಸ್ಟರಾಗಿ ಕೆಲಸ ಮಾಡುತ್ತಿದ್ದ, ದಿಃ 04-12-2013 ರಂದು ಮದ್ಯಾಹ್ನ 2 ಗಂಟೆ ಸಮಯದಲ್ಲಿ ನನ್ನ ಅಕ್ಕ ಚಾಸಾ-4 ರವರು ಕೆಲಸ ಮುಗಿಸಿಕೊಂಡು ಬರುತ್ತಿರುವಾಗ ಆರೋಪಿತನು ಚಾಸಾ-4 ರವರಿಗೆ ಕೈಸನ್ನೆ ಮಾಡಿ ಚುಡಾಯಿಸಿದ ಬಗ್ಗೆ ಮತ್ತು ನನ್ನ ಅಜ್ಜಿ ಚಾಸಾ-9 ರವರಿಗೆ ಆರೋಪಿತನು 3 ತಿಂಗಳ ವೃದ್ಧಾಪ್ಯವೇತನ ನೀಡದಿರುವ ಬಗ್ಗೆ ದಿಃ 06-12-2013 ರಂದು ಮದ್ಯಾಹ್ನ 12 ಗಂಟೆ ಸುಮಾರಿಗೆ ನಾನು ಚಾಸಾ-5 ರವರ ಹೊಲದ ಬಳಿ 1 ನೇ ಆರೋಪಿಗೆ ಕೇಳಲಾಗಿ ಸದರಿಯವನು ನನ್ನ ಕೊರಳಪಟ್ಟಿ ಹಿಡಿದು ಕೈಕಾಲುಗಳಿಂದ ಹೊಡೆದಿದ್ದು ಇರುತ್ತದೆಂದರೆ ಸರಿಯಲ್ಲ. ನಂತರ ಮದ್ಯಾಹ್ನ 12.30 ಗಂಟೆ ಸುಮಾರಿಗೆ ಆರೋಪಿತನ ಮನೆಯ ಹತ್ತಿರ ನಾನು, ಚಾಸಾ-7 ರವರೊಂದಿಗೆ ಮೋಟಾರ್ ಸೈಕಲ್ಲಿನಲ್ಲಿ ಹೋಗುತ್ತಿರುವಾಗ ಈ ಮುಂಚೆ ನಡೆದ ಘಟನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ನನಗೆ ಅವಾಚ್ಯವಾಗಿ ಬೈದು, ಅಡ್ಡಗಟ್ಟಿ ನಿಲ್ಲಿಸಿ, ಕಲ್ಲುಗಳನ್ನು ಹಿಡಿದುಕೊಂಡು ಅವುಗಳಿಂದ ಹೊಡೆದು ಪ್ರಾಣತೆಗೆಯುತ್ತೇನಂತಾ ಜೀವಬೆದರಿಕೆ ಹಾಕಿರುತ್ತಾನೆಂದರೆ ಸರಿಯಲ್ಲ. ಆರೋಪಿತನು ಕಲ್ಲುಗಳಿಂದ ನನ್ನ ಮೊಣಕೈಗೆ, ಕುತ್ತಿಗೆಯ ಹಿಂದೆ, ಬಲಮುಂಗೆಎಗೆ, ಎಡಮೊಣಕಾಲಿಗೆ ಸಾದಾಸ್ವರೂಪದ ಗಾಯಪಡಿಸಿದ್ದು ಇರುತ್ತದೆಂದರೆ ಸರಿಯಲ್ಲ. ಚಾಸಾ-7 ರವರಿಗೆ ಕಲ್ಲುಗಳಿಂದ ಎಡತೊಡೆಗೆ ಹೊಡೆದು ಸಾದಾ ರಕ್ತಗಾಯಪಡಿಸಿರುತ್ತಾನೆಂದರೆ ಸರಿಯಲ್ಲ ಹಾಗೂ ಚಾಸಾ-9 ರವರ ವೃದ್ಧಾಪ್ಯವೇತನ ನೀಡದೇ ಚಾಸಾ-10 ರಿಂದ 15, 17 ರಿಂದ 19, 21 ರಿಂದ 26 ರವರಿಗೆ ಸರ್ಕಾರದ ವತಿಯಿಂದ ಬರುವ ರೂ.500/- ವಿಧವಾವೇತನದ ಹಣವನ್ನು ನೀಡದೇ ಕೇವಲ ರೂ.400/- ನೀಡಿರುತ್ತಾನೆ ಹಾಗೂ ಚಾಸಾ-16 ಮತ್ತು 20 ರವರಿಗೆ ಸರ್ಕಾರದ ವತಿಯಿಂದ ಬರುವ ರೂ.1200/- ಅಂಗವಿಕಲ ಹಣವನ್ನು ನೀಡದೇ ರೂ.1000/- ಗಳನ್ನು ನೀಡಿ ಅವರೆಲ್ಲರಿಗೂ ಮೋಸ ಮಾಡಿರುತ್ತಾನೆಂದರೆ ಸರಿಯಲ್ಲ. ಘಟನೆಯ ಕುರಿತು ನಾನು ನಿಪಿ-1 ರಂತೆ ಆರೋಪಿತನ ವಿರುದ್ಧ ದೂರು ನೀಡಿರುತ್ತೇನೆಂದರೆ ಸರಿಯಲ್ಲ. ನಂತರದಲ್ಲಿ ಪೋಲೀಸರು ನಿಪಿ-2 ಮತ್ತು 3 ರಂತೆ

ಪಂಚನಾಮೆಗಳನ್ನು ಜರುಗಿಸಿ ಮು ಮಾಲುಗಳನ್ನು ವಶಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ಪೋಲೀಸರು ಘಟನಾ ಸ್ಥಳಗಳಲ್ಲಿ ನಕಾಶೆಗಳನ್ನು ತೆಗೆದಿರುತ್ತಾರೆಂದರೆ ಸರಿಯಲ್ಲ. ನಿಪಿ-4 ರಿಂದ 7 ಫೋಟೋಗಳನ್ನು ಪಂಚನಾಮೆ ಕಾಲಕ್ಕೆ ತೆಗೆದಿರುತ್ತಾರೆಂದರೆ ಸರಿಯಲ್ಲ. ಘಟನೆಯ ಕುರಿತು ನಾನು ದಿಃ07-12-2013 ರಂದು ಪೋಲೀಸರ ಮುಂದೆ ಮರು ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸದರಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-8 ಎಂದು ಗುರುತಿಸಲಾಯಿತು. ನಾನು ಆರೋಪಿತನೊಂದಿಗೆ ರಾಜೀಯಾಗಿರುತ್ತೇನೆಂದರೆ ಸರಿ. ಆ ಕಾರಣದಿಂದಾಗಿ ಅವನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಪಾಟೀ ಸವಾಲು. ಆರೋಪಿ ಪರ ವಕೀಲರಿಂದಃ- ಇಲ್ಲ</u>

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ